

# ನೀರೊಳಗೊಂದು ರೆಸಾರ್ಟ್!

‘ರೆಸಾರ್ಟ್’ ಎಂದರೆ ಈಜುಕೊಳ, ಹರಿವ ನೀರು, ಕೃತಕ ಜಲಪಾತ, ಮಕ್ಕಳಾಟದ ಸಾಧನಗಳು, ನೃತ್ಯ ಇತ್ಯಾದಿ ಮೋಜಿನ ವಾತಾವರಣ ನೆನಪಾಗುತ್ತದೆ. ಅದಕ್ಕೊಂದು ಹೊಸ ಸೇರ್ಪಡೆ ಸಾಗರದಾಳದ ಈ ರೆಸ್ಟೋರೆಂಟ್!

ಮಾಲ್ಡೀವ್ಸ್‌ನ ‘ಹಿಲ್ಟನ್ ರೆಸಾರ್ಟ್ ಮತ್ತು ಸ್ಪಾ’, ಸಮುದ್ರದೊಳಗೆ ಅಡಗಿರುವ ಐಷಾರಾಮಿ ಹೊಟೇಲ್ ಒಳಗೊಂಡಿರುವ ಪ್ರಪಂಚದ ಪ್ರಪ್ರಥಮ ರೆಸಾರ್ಟ್ ಆಗಿದೆ.

ಈ ಆಕರ್ಷಣೀಯ ರೆಸಾರ್ಟ್‌ನ ರೆಸ್ಟೋರೆಂಟ್‌ನಲ್ಲಿ ಆಸೀನರಾಗಿ ಸುತ್ತಮುತ್ತ ನೀರಿನಲ್ಲಿ ಈಜುವ ಮೀನುಗಳನ್ನು ವೀಕ್ಷಿಸುತ್ತಾ ಒಳಗೆ ಬೆಚ್ಚಗೆ ಫಿಶ್ ಫ್ರೈ ತಿಂದು ಖುಷ್ ಆಗಿರಬಹುದು.

ಹಾಗೆಯೇ ‘ಸ್ಪಾ’ದ ಸುಖದ ಸುಪ್ಪತ್ತಿಗೆಯಲ್ಲಿ ವಿರಮಿಸಿ ಮಸಾಜ್ ಮಾಡಿಸಿಕೊಳ್ಳುತ್ತಾ ಸ್ವಪ್ನಸಾಗರದಲ್ಲಿ ತೇಲಾಡಬಹುದು.

ಈ ಅದ್ಭುತ ವಿಹಾರಧಾಮದ ವಿನ್ಯಾಸವನ್ನು ನ್ಯೂಜಿಲೆಂಡ್‌ನಲ್ಲಿ ರಚಿಸಲಾಗಿದ್ದು, ಸಿಂಗಪುರದಲ್ಲಿ ನಿರ್ಮಿಸಿ ನಂತರ ಮಾಲ್ಡೀವ್ಸ್‌ನ ಸಮುದ್ರ ತಳದಲ್ಲಿ ಸ್ಥಾಪಿಸಲಾಗಿದೆ. ಒಂದು ಲಂಗರು ಹಾಕಿದ ಸಬ್ ಮೆರೀನ್ ಅನ್ನು ಹೋಲುತ್ತಾ ಮಾಲ್ಡೀವ್ಸ್‌ನ ಸ್ಫಟಿಕದಂತಹ ಶುಭ್ರ ನೀರಿನಾಳದಲ್ಲಿ ಅಸ್ತಿತ್ವದಲ್ಲಿರುವ ಈ ಅತಿ ಸುಂದರ ರೆಸಾರ್ಟ್ ತೀರಾ ಇತ್ತೀಚೆಗಷ್ಟೆ ಸಮುದ್ರೋಲ್ಲಂಘನ ಮಾಡಿ ಬರುವ ಎಲ್ಲಾ ಪ್ರವಾಸಿಗರಿಗಾಗಿ ತೆರೆಯಲ್ಪಟ್ಟಿದ್ದು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ.

■ ರಮಣಶೆಟ್ಟಿ ರೆಂಜಾಳ್



